ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 757 |
| 2. | ಸದಸ್ಯರ ಹೆಸರು | ಶ್ರೀ ಹೆಚ್. ಎಸ್. ಗೋಪಿನಾಥ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | 18.08.2025 |
| 4. | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ರಾಜ್ಯದಲ್ಲಿ ಉದ್ಯೋಗ ಪಡೆಯಲು ಬೇಕಾದ ಕೌಶಲ್ಯ ಹೊಂದಿರುವ ಯುವಜನರ ಸಂಖ್ಯೆ ಎಷ್ಟು? | **ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ – ( ಕೆ.ಎಸ್.ಡಿ.ಸಿ.)**<br>ನಿಗಮದ ವತಿಯಿಂದ ಅಲ್ಪಾವಧಿ ಕೌಶಲ್ಯಾಧಾರಿತ ತರಬೇತಿ ಹೊಂದಿ ಉದ್ಯೋಗ ಪಡೆಯಲು ಬೇಕಾದ ಕೌಶಲ್ಯ ಹೊಂದಿರುವ ಯುವಜನರ ಸಂಖ್ಯೆ 2,21,297.<br>**ರಾಷ್ಟ್ರೀಯ ಜೀವನೋಪಾಯ ಅಭಿಯಾನ**<br>**ದೀನ್ ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ (DAY-NULM)**<br>ದೀನ್ ದಯಾಳ್ ಅಂತ್ಯೋದಯ - ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನಡಿ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ವಳ ನಿಯುಕ್ತಿ ಉಪಘಟಕದಡಿ 2017 ರಿಂದ 2023-24 ರವರೆಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯ ತರಬೇತಿ ಪಡೆದಿರುವ ಫಲಾನುಭವಿಗಳ ಸಂಖ್ಯೆ ಒಟ್ಟು 49,934.<br>**ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ / ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)**<br>ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್ ಮೂಲಕ ಡಿಡಿಯು-ಜಿಕೆವೈ ಯೋಜನೆಯಡಿ 2013-14 ರಿಂದ ಇಲ್ಲಿಯವರೆಗೆ ಉದ್ಯೋಗ ಪಡೆಯಲು ಬೇಕಾದ ಕೌಶಲ್ಯ ಹೊಂದಿದವರ ಸಂಖ್ಯೆ 57582. |
| (ಆ) ಬೆಂಗಳೂರು ನಗರ ಉದ್ಯೋಗ ಒದಗಿಸುವಲ್ಲಿ ಮುಂಚೂಣಿಯಲ್ಲಿದೆಯೇ; ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಎಷ್ಟು ಯುವ ಜನರು ಉದ್ಯೋಗಕ್ಕೆ ನೇಮಕಗೊಂಡಿದ್ದಾರೆ; | **ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ**<br>ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ 49 ಮಿನಿ ಉದ್ಯೋಗ ಮೇಳ / ನೇರ ಸಂದರ್ಶನ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ಆ ಮೂಲಕ 1335 ಅಭ್ಯರ್ಥಿಗಳಿಗೆ ಉದ್ಯೋಗ ಆಹ್ವಾನ ಪತ್ರ ನೀಡಲಾಗಿದೆ.<br>**ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ – ( ಕೆ.ಎಸ್.ಡಿ.ಸಿ.)**<br>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ತರಬೇತಿ ಪಡೆದ 224 ಅಭ್ಯರ್ಥಿಗಳು ಉದ್ಯೋಗಾವಕಾಶವನ್ನು ಪಡೆದಿರುತ್ತಾರೆ. ಅಲ್ಲದೆ ನಿಗಮದಿಂದ ಆಯೋಜಿಸಲಾದ ಉದ್ಯೋಗ ಮೇಳಗಳ ಮುಖೇನ 10,075 ಅಭ್ಯರ್ಥಿಗಳು ಉದ್ಯೋಗಾವಕಾಶ ಪತ್ರಗಳನ್ನು ಪಡೆದಿರುತ್ತಾರೆ. |

**ರಾಷ್ಟ್ರೀಯ ಜೀವನೋಪಾಯ ಅಭಿಯಾನ**

**ದೀನ್ ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ (DAY-NULM)**

ದೀನ್ ದಯಾಳ್ ಅಂತ್ಯೋದಯ - ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನಡಿ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ವಳನಿಯುಕ್ತಿ ಉಪಘಟಕದಡಿ 2022-23 ನೇ ಸಾಲಿನಲ್ಲಿ ಬೆಂಗಳೂರು ನಗರದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈ ಕೆಳಕಂಡಂತೆ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿರುತ್ತದೆ.

| ಕ್ರ.ಸಂ | ಬಿಬಿಎಂಪಿ ವಲಯಗಳು | ತರಬೇತಿ ಪಡೆದ ಫಲಾನುಭವಿಗಳ ಸಂಖ್ಯೆ |
|---|---|---|
| 1 | ಪಶ್ಚಿಮ ವಲಯ | 294 |
| 2 | ದಕ್ಷಿಣ ವಲಯ | 49 |
| 3 | ಯಲಹಂಕ ವಲಯ | 332 |
| | ಒಟ್ಟು | 675 |

ದೀನದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನವು ದಿನಾಂಕ: 30.09.2024 ರ ಅಂತ್ಯಕ್ಕೆ ಮುಕ್ತಾಯವಾಗಿರುತ್ತದೆ. ಹೊಸ ಯೋಜನೆಯಾದ ದೀನದಯಾಳ್ ಜನ್ ಆಜೀವಿಕ ಯೋಜನೆ-(ಶಹರಿ) (ಪ್ರಾಯೋಗಿಕ) ಯು ದಿನಾಂಕ:01.10.2024 ರಿಂದ 30.09.2025 ರವರೆಗೆ ಅಥವಾ ಹೊಸ ಯೋಜನೆ ಅನುಷ್ಠಾನವಾಗುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯ ವರೆಗೆ ಮುಂದುವರೆಸಿ ಆದೇಶಿಸಲಾಗಿರುತ್ತದೆ. ಅನುದಾನ ಬಿಡುಗಡೆಯಾದ ನಂತರ ತರಬೇತಿ ಪಡೆದ ಫಲಾನುಭವಿಗಳಿಗೆ ಪ್ರಮಾಣೀಕರಣ ಮತ್ತು ಮೌಲ್ಯಮಾಪನವನ್ನು ಕೈಗೊಳ್ಳಲು ಕ್ರಮವಹಿಸಲಾಗುವುದು.

**ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ / ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)**

ಡಿಡಿಯು-ಜಿಕೆವೈ ಕಾರ್ಯಕ್ರಮದಡಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಉದ್ಯೋಗಕ್ಕೆ ನೇಮಕಗೊಂಡಿರುವ ಯುವಜನರ ವಿವರ ಈ ಕೆಳಕಂಡಂತಿದೆ.

| ವರ್ಷ | 2022-23 | 2023-24 | 2024-25 | ಒಟ್ಟು |
|---|---|---|---|---|
| ಉದ್ಯೋಗಕ್ಕೆ ನೇಮಕಗೊಂಡ ಅಭ್ಯರ್ಥಿಗಳ ಸಂಖ್ಯೆ | 598 | 367 | 756 | 1721 |

(ಇ) ಇಂಗ್ಲೀಷ್ ಭಾಷೆ, ಕಂಪ್ಯೂಟರ್ ಕೌಶಲ್ಯ, ಸಂಖ್ಯಾ ಕೌಶಲ್ಯ ವಿಮರ್ಶಾತ್ಮಕ ಚಿಂತನ (Critical thinking) ಕೌಶಲ್ಯಗಳಲ್ಲಿ ರಾಜ್ಯ ಇತರ ರಾಜ್ಯಗಳಿಗಿಂತ ಹಿಂದುಳಿಯಲು ಕಾರಣಗಳೇನು

**ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ / ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)**

ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯ ತರಬೇತಿ ಕಾರ್ಯಕ್ರಮದ ಪಠ್ಯಕ್ರಮದ ಅನುಗುಣವಾಗಿ ಇಂಗ್ಲೀಷ್ ಭಾಷೆ, ಕಂಪ್ಯೂಟರ್ ಕೌಶಲ್ಯ, ಜೀವನ ಕೌಶಲ್ಯ, ಸಂಖ್ಯಾ ಕೌಶಲ್ಯ, ವಿಮರ್ಶಾತ್ಮಕ ಚಿಂತನೆ (Critical thinking) ಕೌಶಲ್ಯಗಳು ಸೇರಿದಂತೆ ತರಬೇತಿಯನ್ನು ನೀಡಲಾಗುತ್ತಿದೆ. ಪ್ರತಿ ಅಭ್ಯರ್ಥಿಗಳಿಗೆ 160 ಗಂಟೆಗಳ ಅವಧಿಯಲ್ಲಿ ಈ ಅವಶ್ಯಕ ವಿಷಯಗಳ ಕುರಿತಾದ ಜ್ಞಾನ ಮತ್ತು ಕೌಶಲ್ಯ ತರಬೇತಿಗಳನ್ನು ಒದಗಿಸಲಾಗುತ್ತಿದೆ.

| | |
|---|---|
| (ಈ) ಕೌಶಲ್ಯಗಳನ್ನು ಸುಧಾರಿಸಲು ಪರಿಣಾಮಕಾರಿಯಾಗಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | <u>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ – ( ಕೆ.ಎಸ್.ಡಿ.ಸಿ.)</u><br>ನಿಗಮದ ವತಿಯಿಂದ ಕೌಶಲ್ಯಗಳನ್ನು ಸುಧಾರಿಸಲು ಪರಿಣಾಮಕಾರಿಯಾಗಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕಾರ್ಯ ಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.<br>1. ಕೌಶಲ್ಯ ನೀತಿ: ಕೌಶಲ್ಯಾಭಿವೃದ್ಧಿಯ ಪ್ರಕ್ರಿಯೆಗಳನ್ನು ಏಕರೂಪಗೊಳಿಸುವ ನಿಟ್ಟಿನಲ್ಲಿ ಎಲ್ಲಾ ಭಾಗಿದಾರರನ್ನು ಒಳಗೊಂಡಂತೆ ನೀತಿಯನ್ನು ರೂಪಿಸಲಾಗುತ್ತಿದೆ.<br>2. ಸಿ.ಎಂ.ಕೆ.ಕೆ.ವೈ 2.0: ಯೋಜನೆಯನ್ನು ಪರಿಣಾಮಕಾರಿಯಾಗಿ ಹಾಗೂ ತ್ವರಿತವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಆಯವ್ಯಯ ಘೋಷಣೆಯನ್ವಯ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಂತೆ ಕೌಶಲ್ಯ ಪರಿಸರ ಸುಧಾರಣೆ ಹಾಗೂ ಉದ್ಯೋಗಾಧಾರಿತ ತರಬೇತಿ ನೀಡಲು ನೂತನ ಮಾರ್ಗಸೂಚಿಗಳನ್ನು ರಚಿಸಲಾಗುತ್ತಿದೆ.<br>3. **Industry Linkage Cell** ಮತ್ತು **Future Skills:** ಯುವಕರಿಗೆ ಭವಿಷ್ಯದ ಕೌಶಲ್ಯ (Future Skills) ತರಬೇತಿಗಳನ್ನು ಕೈಗಾರಿಕಾ ಆಧಾರಿತ ಬೇಡಿಕೆ ಅನುಸಾರ ನೀಡುವುದು ಹಾಗೂ ಉದ್ಯೋಗಾವಕಾಶ ಒದಗಿಸುವುದು.<br>4. ಕರ್ನಾಟಕ ಸ್ಕಿಲ್ ಒಲಂಪಿಕ್ಸ್: ಅಂತರಾಷ್ಟ್ರೀಯ ಕೌಶಲ್ಯ ಸ್ಪರ್ಧೆಗೆ ಹಾಗೂ ರಾಷ್ಟ್ರೀಯ ಕೌಶಲ್ಯ ಸ್ಪರ್ಧೆಗೆ ಪೂರಕವಾಗಿ ಕೌಶಲ್ಯ ಒಲಂಪಿಕ್ಸ್ ಮೂಲಕ ರಾಜ್ಯದ ಯುವ ಜನತೆಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಪ್ರೇರೇಪಿಸುವುದು.<br>5. ವಿದೇಶಿ ಭಾಷಾ ತರಬೇತಿ: ಅಂತರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಉದ್ಯೋಗಾವಕಾಶಗಳನ್ನು ಪಡೆಯಲು ಜರ್ಮನ್, ಇಂಗ್ಲೀಷ್, ಸ್ಪ್ಯಾನಿಷ್ ಹಾಗೂ ಇತರೆ ಭಾಷೆಗಳಲ್ಲಿ ತರಬೇತಿ ನೀಡಲು ಕ್ರಮವಹಿಸಲಾಗುತ್ತಿದೆ.<br>6. ಕಲಿಕೆ ಜೊತೆ ಕೌಶಲ್ಯ: ಪದವಿ ತರಗತಿಗಳಲ್ಲಿ ಕೌಶಲ್ಯ ಸುಧಾರಿತ ಕಲಿಕೆ ಜೊತೆ ಕೌಶಲ್ಯ ಕಾರ್ಯಕ್ರಮದಡಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ 50 ಗಂಟೆಗಳ ಕೈಗಾರಿಕಾ ಆಧಾರಿತ ತರಬೇತಿ ನೀಡಲಾಗುತ್ತಿದೆ.<br><br><u>ರಾಷ್ಟ್ರೀಯ ಜೀವನೋಪಾಯ ಅಭಿಯಾನ</u><br><u>ದೀನ್ ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ (DAY-NULM)</u><br>ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರದ ಪತ್ರ ದಿನಾಂಕ:03.04.2023 ರನ್ವಯ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ವಳನಿಯುಕ್ತಿ ಉಪಘಟಕವನ್ನು ಮುಕ್ತಾಯಗೊಳಿಸಿರುತ್ತಾರೆ.<br><br>ದೀನದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನವು ದಿನಾಂಕ: 30.09.2024 ರ ಅಂತ್ಯಕ್ಕೆ ಮುಕ್ತಾಯವಾಗಿರುತ್ತದೆ. ಹೊಸ ಯೋಜನೆಯಾದ ದೀನದಯಾಳ್ ಜನ್ ಆಜೀವಿಕ ಯೋಜನೆ-(ಶಹರಿ) (ಪ್ರಾಯೋಗಿಕ) ಯು ದಿನಾಂಕ:01.10.2024 ರಿಂದ 30.09.2025 ರವರೆಗೆ ಅಥವಾ ಹೊಸ ಯೋಜನೆ ಅನುಷ್ಠಾನವಾಗುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಿ ಆದೇಶಿಸಲಾಗಿರುತ್ತದೆ. ಹೊಸ ಮಾರ್ಗಸೂಚಿಯು ಸ್ವೀಕೃತವಾದ ನಂತರ ಅದರಂತೆ ಕ್ರಮವಹಿಸಲಾಗುವುದು.<br><br><u>ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ / ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)</u><br>ರಾಜ್ಯದಲ್ಲಿ ಡಿಡಿಯು-ಜಿಕೆವೈ ಕಾರ್ಯಕ್ರಮದಡಿ ಒದಗಿಸಲಾಗುವ ಕೌಶಲ್ಯ ಆಧಾರಿತ ತರಬೇತಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಎಲ್ಲಾ ಹಂತಗಳಲ್ಲೂ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಚಟುವಟಿಕೆಯನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದೆ.<br><br>ಮುಂದುವರೆದು, ಯೋಜನೆಯಡಿ CXO-Alumini Meet ಆಯೋಜನೆ |

| | |
|---|---|
| | ಮತ್ತು ಉತ್ತಮ ಅಭ್ಯಾಸಗಳ ಪ್ರಕಟಣೆ, IEC ಚಟುವಟಿಕೆಗಳು ಹಾಗೂ ಆಸಕ್ತ ಯುವಜನರೊಂದಿಗೆ ಸಂವಾದ ಮುಂತಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ ಕೌಶಲ್ಯ ಸುಧಾರಣೆಗೆ ನಿರಂತರ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಕೌಉಜೀಇ 20 ಕೌಗುಪ್ರ 2025

(ಡಾ. ಶರಣಪ್ರಕಾಶ ಆರ್ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ
ಸಚಿವರು.